ವಿವರಗಳು	2000-2001		1999-2000	
	ಪ್ರಮಾಣ (ಎಂಟಿಎಸ್)	ಬೆಲೆ (ರೂ.ಲಕ್ಷ ಗಳಲ್ಲಿ)	ಪ್ರಮಾಣ (ಎಂಟಿಎಸ್)	ಬೆಲೆ (ರೂ.ಲಕ್ಷ ಗಳಲ್ಲಿ)
ಯೂರಿಯಾ	3,48,713	43302.34	3,33,289	33,859.19
ಡೈಅಮೋನಿಯಂ ಫಾಸ್ಪೇಟ್	1,67,000	20591.91	2,08,769	25391.60
ಇತರೆ	57,526	3607.54	35,806	2064.44
ಒಟ್ಟು	5,73,239	67501.79	5,77,864	61315.23

ಇ) ಸದರಿ ಕಂಪನಿಯು 1996-97ರ ನಂತರ ಲಾಭದಲ್ಲಿ ನಡೆಯುತ್ತಿದೆ. ದಿ:31-3-2001ರವರೆಗೆ ಕಂಪನಿಯ ಸಂಚಿತ ನಿವ್ವಳ ಲಾಭ ರೂ.41.53 ಕೋಟಿಗಳು. ರಾಜ್ಯ ಸರ್ಕಾರದ ಸಾಲ ರೂ.28.32 ಕೋಟಿಗಳಾಗಿದ್ದು ಅದನ್ನು 5 ಸಮ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗಿದ್ದು ಮೊದಲನೆ ಕಂತು 2005-06ರಿಂದ ಪ್ರಾರಂಭವಾಗುತ್ತಿದೆ. ಕೇಂದ್ರ ಸರ್ಕಾರದಿಂದ ಸದರಿ ಕಂಪನಿಗೆ ಯಾವುದೇ ಧನಸಹಾಯವಿಲ್ಲ.

ಈ) ಈ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಿಗೆ 1996-97ರಿಂದ ಮಾಸಿಕ ರೂ.1-00ನ್ನು ಸಂಭಾವನೆಯಾಗಿ ಕಂಪನಿಯು ಪಾವತಿಸುತ್ತಿದೆ.

ಪಶುಪಾಲನಾ ಅಭಿವೃದ್ಧಿಗಾಗಿ ಹಾಲಿನ ಹಸು ಅಭಿವೃದ್ಧಿ ತಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 366(536)

ಸದಸ್ಯರ ಹೆಸರು : ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಪಶುಸಂಗೋಪನಾ ಇಲಾಖೆಯಲ್ಲಿ ಹಾಲಿನ ಹಸು (ರಾಸು ತಳಿ)ಗಳ ಅಭಿವೃದ್ಧಿ ಕುರಿತು ಕೈಗೊಂಡಿರುವ ಕ್ರಮಗಳೇನು?

ಆ) ಉತ್ತರ ಕರ್ನಾಟಕ ಭಾಗದ ಉತ್ತಮ ಹಾಲು ಹಿಂಡುವ ಗ್ರಾಮೀಣ ಕೃಷಿ ತಳಿ (ರಾಸು)ಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸುತ್ತಿದೆಯೇ?

ಇ) ಮಿಶ್ರತಳಿ ಹಾಗೂ ಲಾಭದಾಯಕ ತಳಿಗಳನ್ನು ಗುರುತಿಸಿರುವ ಹಸುಗಳ ಹೆಸರುಗಳೇನು? ಇವು ಯಾವ ಭಾಗದಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿವೆ?

ಈ) ಹಾಲು ಸಂಶೋಧನೆಯಲ್ಲಿ ಉತ್ತಮ ಸಾಧನೆ ಮಾಡಲು ಕೈಗೊಂಡ ಇನ್ನಿತರ ಕಾರ್ಯಕ್ರಮಗಳೇನು? (ಪೂರ್ಣ ಮಾಹಿತಿ ಒದಗಿಸುವುದು)

ಉತ್ತರ

ಅ) ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಕೃತಕ ಗರ್ಭಧಾರಣ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹಾಗೂ 'ಆಮದು ಮಾಡಿಕೊಂಡ ಹೋರಿಗಳಿಂದ ಉತ್ತಮ ಗುಣಮಟ್ಟದ ವೀರ್ಯವನ್ನು ಪಡೆದು ಉಪಯೋಗಿಸಿ ಅವುಗಳಿಂದ ಹೆಚ್ಚಿನ ಹಾಲು ನೀಡುವ ರಾಸುಗಳನ್ನು ಉತ್ಪಾದಿಸಲಾಗುತ್ತಿದೆ.

ಆ) ಹೌದು.

ಇ) ಜರ್ಸಿ ಮತ್ತು ಹೆಚ್‌ಎಫ್ ಮಿಶ್ರ ತಳಿಗಳು : ರಾಜ್ಯ ವ್ಯಾಪಿ ಹಳ್ಳಿಕಾರ್ ದೇಶೀಯ ತಳಿ: ತುಮಕೂರು, ಮೈಸೂರು, ಮಂಡ್ಯ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಹಾಸನ, ಕೋಲಾರ.

ಅಮೃತ್‌ಮಹಲ್ ದೇಶಿಯ ತಳಿ: ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ದಾವಣಗೆರೆ.

ಖಿಲ್ಲಾರ್ ದೇಶಿಯ ತಳಿ: ವಿಜಾಪುರ, ಬೆಳಗಾಂ ಮತ್ತು ಧಾರವಾಡ.

ದೇವಣಿ ದೇಶಿಯ ತಳಿ: ರಾಯಚೂರು, ಬಳ್ಳಾರಿ ಮತ್ತು ಗುಲ್ಬರ್ಗಾ.

ಈ) ಮುಂದುವರಿದ ಮಿಶ್ರತಳಿ ಉತ್ಪಾದನೆ ಮತ್ತು ಉತ್ತಮ ಪೌಷ್ಟಿಕ ನಿರ್ವಹಣೆ (ಲೀಸ್ಟ್ ಕಾಸ್ಟ್ ಫಾರ್ಮ್ಯುಲಾ) ಇವುಗಳು ಮುಖ್ಯ ಸಂಶೋಧನಾ ಪ್ರಯತ್ನಗಳಾಗಿವೆ.

ಕರ್ನಾಟಕ ಹಾಲು ಮಹಾ ಮಂಡಳಿಯಲ್ಲಿ ಹಾಲಿನ ಉತ್ಪನ್ನಗಳ ಬಗ್ಗೆ ಸಂಶೋಧನೆ ನಡೆಸಿ ನಂದಿನಿ ಮೈಸೂರ್ ಪಾಕ್, ಬಾದಾಮ್ ಬರ್ಫಿ, ಬಾದಾಮ್ ಪೌಡರ್, ನಂದಿನಿ ಬೈಟ್, ಪ್ರೀಮಿಯಂ ಗೋಡಂಬಿ ಬರ್ಫಿ, ಸ್ಟರಿಲೈಸ್ಡ್ ಸುವಾಸಿತ ಹಾಲುಗಳನ್ನು ಅಭಿವೃದ್ಧಿಪಡಿಸಿದೆ : ರೂಪಿಸಿದೆ. ಭಾರತ ಸರ್ಕಾರದ ಉದ್ದಿಮೆಯಾದ 'ಟಿಫಾಕ್' ಸಂಸ್ಥೆಯ ನೆರವಿನೊಡನೆ ಮತ್ತಷ್ಟು ಉತ್ಕೃಷ್ಟ 'ಶುಚಿ ಹಾಲು ಉತ್ಪಾದನೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಧಾರವಾಡ ಕೆ.ಎಂ.ಎಫ್. ಸಿಬ್ಬಂದಿ-ನೌಕರ ವರ್ಗದ ಹಾಗೂ ಹಾಲು ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 367(541)

ಸದಸ್ಯರ ಹೆಸರು : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಧಾರವಾಡ ಕೆ.ಎಂ.ಎಫ್‌ನಲ್ಲಿ ಅವಶ್ಯಕತೆಗಿಂತ ಹೆಚ್ಚಾಗಿ ಸಿಬ್ಬಂದಿಯಿರುವುದು ನಿಜವೇ? (ಹುದ್ದೆವಾರು ವಿವರ ನೀಡುವುದು)

ಆ) ಧಾರವಾಡ ಘಟಕಕ್ಕೆ ಹಾಲು ಪ್ರತಿನಿತ್ಯ ಯಾವ ಯಾವ ಸಂಸ್ಥೆಗಳಿಂದ ಬಂದು ಸೇರುತ್ತಿದೆ? ಪ್ರತಿನಿತ್ಯ ಹಾಲಿನಿಂದ ಸಂಸ್ಕರಿಸಿ ಮಾರಾಟಕ್ಕಾಗಿ ಪರಿವರ್ತಿಸಿದ ವಸ್ತುಗಳ ವಿವರ ಒದಗಿಸುವುದು?

ಇ) ಜಿಲ್ಲೆಯ ಸುತ್ತಲಿನ ಪ್ರದೇಶದಿಂದ ತಮ್ಮ ಬೇಡಿಕೆಯ ಹಾಲು ದೊರಕಿಸಿಕೊಳ್ಳಲು ಮೂರು ವರ್ಷಗಳಿಂದ ತೆಗೆದುಕೊಂಡಿರುವ ಕ್ರಮಗಳೇನು?

ಈ) ಧಾರವಾಡ ಘಟಕದಲ್ಲಿ ಇತ್ತೀಚಿನ ಮೂರು ವರ್ಷಗಳಲ್ಲಿ ಹಾಲು ಪರಿವರ್ತಕ ವಸ್ತುಗಳು ಮಾರಾಟವಾಗದೆ ಉಳಿದ ವಿವರಗಳನ್ನು ನೀಡುವುದು? ಹಾನಿಯಾದ ಹಣದ ಮೊತ್ತವೆಷ್ಟು?

(ವರ್ಷವಾರು ಮಾಹಿತಿ ಒದಗಿಸುವುದು)

ಉತ್ತರ

ಅ) ನಿಜ. ಧಾರವಾಡ ಹಾಲು ಒಕ್ಕೂಟದಲ್ಲಿ ಒಟ್ಟು 549 ಹುದ್ದೆಗಳಿಗೆ ಸರ್ಕಾರದಿಂದ